

# ಕಣ್ಣಾರೆ ಕಂಡ ವಾಲು ಗೋಪುರ!

ಪ್ರವಾಸದ ಅನುಭವ ಸವಿನೆನಪಿನ ಸಾಲಿನಲ್ಲಿ ನಿಂತು ಜೀವನದುದ್ದಕ್ಕೂ ಮೆಲುಕು ಹಾಕುವಂತೆ ಮಾಡುತ್ತದೆ. ಇಟಲಿ ದೇಶದ ಪೀಸಾದ ವಾಲು ಗೋಪುರವನ್ನು ಕಣ್ಣಾರೆ ಕಾಣುವ ಸುಯೋಗ ನನಗೆ ಒದಗಿಬಂದಿದ್ದು ಎಂದೆಂದೂ ಮರೆಯಲಾಗದ ರೋಚಕ ನೆನಪಾಗಿ ಉಳಿದಿದೆ.

■ ಪ್ರಭಾ ಪ್ರಸಾದ್

ಕೆಲವೊಮ್ಮೆ ಪ್ರವಾಸದ ದಿನಗಳ ರೋಚಕ ಅನುಭವ ಜೀವನದುದ್ದಕ್ಕೂ ಸವಿನೆನಪಾಗಿ ಉಳಿಯುತ್ತದೆ. ಒಮ್ಮೆ ನೋಡಿ ಬಂದ ಜಾಗ, ಅಲ್ಲಿಗೆ ಹೋಗುವಾಗ ಆಗಿದ್ದ ಅನುಭವಗಳು, ತಂಗಿದ್ದ ಸ್ಥಳ, ಸವಿದ ಊಟ ತಿಂಡಿ.. ಎಲ್ಲವೂ ನೆನಪಿನ ಬುತ್ತಿಯೊಳಗೆ ಬಂಧಿಯಾಗಿರುತ್ತದೆ.

ನನಗೆ ಚಿಕ್ಕಂದಿನಿಂದಲೂ ವಿಶ್ವದ ಕೆಲವು ಪ್ರಸಿದ್ಧ ಸ್ಮಾರಕಗಳನ್ನು ಚಿತ್ರಗಳಲ್ಲಿ ನೋಡಿದಾಗ ಆಸಕ್ತಿ ಕೆರಳುತ್ತಿತ್ತು. ಅದರಲ್ಲೂ ಇಟಲಿ ದೇಶದಲ್ಲಿರುವ ಪೀಸಾದ ವಾಲು ಗೋಪುರವನ್ನು ಎಂದಾದರೊಮ್ಮೆ ಕಣ್ಣಾರೆ ಕಾಣಬೇಕೆನ್ನುವ ಹಂಬಲ ಇತ್ತು. ಈಗ್ಗೆ ಕೆಲವು ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿರುವ ಮಗ, ಸೊಸೆಯರೊಂದಿಗೆ 'ಟ್ರಾಫಾಲ್ಗರ್' ಎಂಬ ಪ್ರವಾಸಿ ಸಂಸ್ಥೆಯ ಮೂಲಕ ಯುರೋಪ್ ಪ್ರವಾಸವನ್ನು ಕೈಗೊಂಡೆವು.

ಇಟಲಿ ದೇಶ ನಾವು ಸಂದರ್ಶಿಸಲಿರುವ ದೇಶಗಳ ಪಟ್ಟಿಯಲ್ಲಿದ್ದುದರಿಂದ ವಾಲು ಗೋಪುರವನ್ನು ನೋಡುವ ನನ್ನ ಆಸೆ ಗರಿಕೆದರಿತು! ಅದರ ಹಿಂದೆಯೇ ನಿರಾಸೆಯೂ ಕಾದಿತ್ತು. ನಾವು ಭೇಟಿ ನೀಡಲಿದ್ದ ತಾಣಗಳಲ್ಲಿ ಪೀಸಾ ನಗರದ ಹೆಸರೇ ಇರಲಿಲ್ಲ! ಆದರೂ ನಾವು ಪಟ್ಟುಬಿಡಲಿಲ್ಲ. ನನ್ನ ಮಗ ಮತ್ತು ನಮ್ಮ ಸಹ ಪ್ರಯಾಣಿಕರಿದ್ದ ಆಸ್ಟ್ರೇಲಿಯಾದ ನಾಲ್ಕಾರು ಜನ, ನಮ್ಮ ಪ್ರವಾಸದ ಗೈಡ್‌ನೊಂದಿಗೆ ನಮ್ಮ ಬೇಡಿಕೆಯನ್ನು ಮುಂದಿಟ್ಟರು. ಫ್ಲಾರೆನ್ಸ್ ಎಂಬ ನಗರವನ್ನು ತಲುಪಿದಾಗ ನಮ್ಮ ಗೈಡ್, ನಮಗಾಗಿ ಪೀಸಾ ನಗರಕ್ಕೆ ಹೋಗುವ ರೈಲಿನ ವಿವರ, ನಿಲ್ದಾಣ ತಲುಪಲು ಟ್ಯಾಕ್ಸಿ ಎಲ್ಲವನ್ನು ಏರ್ಪಾಡು ಮಾಡಿ, ನಮ್ಮೊಂದಿಗೆ ಸಹಕರಿಸಿದ. ಹಾಗಾಗಿ ನಾವು ನಮ್ಮ ಪ್ರವಾಸಿ ಗುಂಪಿನಿಂದ ಬೇರೆಯಾಗಿ ಪೀಸಾಗೆ ಹೊರಟ ರೈಲನ್ನೇರಿದೆವು.

ವಿಶ್ವವಿಖ್ಯಾತ ಪೀಸಾ ಕೆಥೆಡ್ರಾಲ್ ಸಮೀಪವೇ ಇರುವ ಹಸಿರು ಹಾಸಿನ ನಡುವೆ ನಿಂತಿದ್ದ ವಾಲು ಗೋಪುವರನ್ನು ನೋಡಿ ರೋಮಾಂಚಿತಳಾದೆ. ನನ್ನ ಬಾಲ್ಯದ ಕನಸು ನನಸಾಗಿತ್ತು. ಇಟಲಿಯ ಬೊನ್ನಾನೋ ಪಿಸಾನೋ ಎಂಬ ವಾಸ್ತುಶಿಲ್ಪಿಯು 12ನೇ ಶತಮಾನದಲ್ಲಿ ನಿರ್ಮಿಸಿದ ಮಾರ್ಬಲ್ ಕಲ್ಲಿನ ಈ ಗೋಪುರವು 183 ಅಡಿಗಳಷ್ಟು ಎತ್ತರವಿದೆ. 294 ಮೆಟ್ಟಿಲುಗಳಿರುವ ಈ ಗೋಪುರವು, ಸುತ್ತಳತೆಯಲ್ಲಿ ತಳಭಾಗದಿಂದ ತುದಿಯವರೆಗೂ ಕಡಿಮೆಯಾಗುತ್ತಾ ಹೋಗಿದೆ. ಬಲಿಷ್ಠವಾದ ತಳಪಾಯವಿಲ್ಲದ ಕಾರಣ ಈ ಕಟ್ಟಡವು ಕಾಲ ಸರಿದಂತೆ ಕೆಲವು ಅಂಗುಲಗಳಷ್ಟು ವಾಲತೊಡಗಿತು. 1990 ಮತ್ತು 2001ರಲ್ಲಿ ಈ ಗೋಪುರದ ದುರಸ್ತಿ ಕಾರ್ಯವು ನಡೆಯಿತು.

ಸಣ್ಣಗೆ ಹನಿಯುತ್ತಿದ್ದ ಮಳೆಯಲ್ಲಿಯೂ, ಪ್ರವಾಸಿಗರ ಉತ್ಸಾಹಕ್ಕೆ ತಡೆ ಇರಲಿಲ್ಲ. ಮನಸ್ಸಿಗೆ ತೃಪ್ತಿಯಾಗುವಷ್ಟು ಈ ಅದ್ಭುತ ಸ್ಮಾರಕದ ಸುತ್ತಮುತ್ತ ಸುತ್ತಾಡಿ ರಾತ್ರಿ ಊಟದ ವೇಳೆಗೆ ಫ್ಲಾರೆನ್ಸ್ ನಗರಕ್ಕೆ ಹಿಂತಿರುಗಿ ನಮ್ಮ ಪ್ರವಾಸಿ ಗುಂಪನ್ನು ಸೇರಿದೆವು. ಈ ಪ್ರವಾಸ ಜೀವನದುದ್ದಕ್ಕೂ ಮರೆಯಲಾರದ ಸವಿಸವಿ ನೆನಪಾಗಿ ಉಳಿದಿದೆ. ■